(ಇಂದು ದಿನಾಂಕ 14-02-2020 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ವಾದಿ ಪರ ಶ್ರೀ ವಿ.ಜಿ.ಎಚ್. ವಕೀಲರಿಂದ-**

1. ಪ್ರತಿವಾದಿ ನಂ.2 ಗಣಪತಿ ನನ್ನ ಅಣ್ಣ ಎಂದರೆ ಸರಿಯಲ್ಲ . ಪ್ರತಿವಾದಿ ನಂ. 4 ಮತ್ತು 5 ರವರು ನನ್ನ ತಂಗಿಯಂದಿರು ಎಂದರೆ ನಾನು ಅಲ್ಲಗಳೆಯುತ್ತೇನೆ. ದಾವಾಸ್ತಿಯಲ್ಲಿ ನನ್ನ ತಂದೆ-ತಾಯಿಯ ಜೊತೆ 2 ನೇ ಪ್ರತಿವಾದಿ ವಾಸವಾಗಿದ್ದರು ಎಂದರೆ ಸರಿಯಲ್ಲ . ನಾನು ಹುಟ್ಟಿನಿಂದ ದಾವಾಸ್ತಿಯಲ್ಲಿ ವಾಸವಿದ್ದೇನೆ. ನಾನು ನೌಕರಿಗೆ ಹೊರಗೆ ಹೋದರೂ ವಾಪಸ್ ಮನೆಗೆ ಬರುತ್ತಿದ್ದೆನು.

2. ದಾವಾ 'ಬ' ಮನೆ ಮತ್ತು ಕೋಟಿತೀರ್ಥದ ನಡುವೆ ರಸ್ತೆ ಇರುತ್ತದೆ . ಸದ್ರಿ ಕೋಟಿತೀರ್ಥದ ಸುತ್ತಮುತ್ತಲಿನ ಮನೆಗಳಲ್ಲಿ ಪಿತೃ ಕಾರ್ಯಗಳನ್ನು ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನನ್ನ ತಂದೆ ವೈದಿಕರಾಗಿದ್ದರು ಎಂದರೆ ಸರಿ . ಸದ್ರಿಯವರು ಪಿತೃ ಕಾರ್ಯ ನಡೆಸುತ್ತಿದ್ದರು ಎಂದರೆ ಸಾಕ್ಷಿ ಕೆಲವೊಬ್ಬರು ಶಿಷ್ಯಂದಿರು ಕರೆತಂದರೆ ಮಾತ್ರ ಪಿತೃಕಾರ್ಯ ನಡೆಸುತ್ತಿದ್ದರು ಎನ್ನುತ್ತಾರೆ.

**3.** ಮೂ.ದಾ. ನಂ. 96/1991 ನ್ನು ದಾಖಲಿಸುವ ಸಮಯ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿ. ನನ್ನ ತಂದೆ ಸುಬ್ರಾಯ ಇವರಿಗೆ ವಿನಾಯಕ, ವಿಶ್ವೇಶ್ವರ ಹಾಗೂ ಶಂಕರ ಎನ್ನುವ ತಮ್ಮಂದಿರು ಇದ್ದರು. ನನ್ನ ತಂದೆ ತಮ್ಮ ಜೀವಿತ ಕಾಲದಲ್ಲಿ ಕುಟುಂಬದ ವಹಿವಾಟು ನಡೆಸುತ್ತಿದ್ದರು ಎಂದರೆ ಸಾಕ್ಷಿ, ಅವರಿಗೆ ವಯಸ್ಸಾಗಿದ್ದ ಕಾರಣ ನಾನು ನೋಡಿಕೊಳ್ಳುತ್ತಿದ್ದೆನು ಎನ್ನುತ್ತಾರೆ. ಸದ್ರಿ ಸಮಯ ನನ್ನ ತಂದೆಯ ಗಂಡು ಮತ್ತು ಹೆಣ್ಣು ಮಕ್ಕಳು ನಮ್ಮ ಮನೆಗೆ ಹೋಗಿ – ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ . ನನ್ನ ಪರವಾಗಿ ನನ್ನ ತಂದೆ ಸಾಮಾನ್ಯ ಮೊಕ್ತ್ಯಾರುನಾಮೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ . ನನ್ನ ತಂದೆ 18-10-2007 ರಂದು ಮೃತಪಟ್ಟಿರುತ್ತಾರೆ. ದಾವಾ ಮನೆ ನಂ. 123 ಇರುತ್ತದೆ. ಸಾಕ್ಷಿದಾರರಿಗೆ ಈಗ ಸದ್ರಿ ಮನೆಯ ತೆರಗೆ ನಿರ್ಧರಣಾ ಪಟ್ಟಿಯ ಪ್ರತಿಯನ್ನು ತೋರಿಸಲಾಗಿ ಅವರು ಒಪ್ಪಿಕೊಂಡ ಕಾರಣ ಅದನ್ನು ಈಗ ನಿ.ಪಿ. 9 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ವಾರಿಸಾ ಆದ ನಂತರ ನನ್ನ ಹೆಸರು ಸದ್ರಿ ಮನೆಗೆ ದಾಖಲಾಗಿದೆ ಎನ್ನುತ್ತಾರೆ. ವೈದಿಕ ದಂಧೆಯಿಂದ ನನ್ನ ತಂದೆಗೆ ಹೇರಳವಾದ ಉತ್ಪನ್ನ ಬರುತ್ತಿತ್ತು ಎಂದರೆ ಸರಿಯಲ್ಲ . ನನ್ನ ತಂದೆ ಗೋಕರ್ಣ ಗ್ರಾಮದ ಸಿಂಡಿಕೇಟ್ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದರು ಎಂದರೆ ಸಾಕ್ಷಿ ಅವರಿಗೆ ಯಾವುದೇ ಬ್ಯಾಂಕ್ ಖಾತೆ ಇರಲಿಲ್ಲ ಎನ್ನುತ್ತಾರೆ. ನಾನು ಮೊಕ್ತ್ಯಾರುನಾಮೆಯ ಆಧಾರದಲ್ಲಿ ನನ್ನ ತಂದೆಯವರಿಗೆ ಸೇರಿದ ರೂ. 15 ಲಕ್ಷಕ್ಕಿಂತಲೂ ಹೆಚ್ಚಿನ ಹಣವನ್ನು ಲಪಟಾಯಿಸಿರುತ್ತೇನೆ ಎಂದು ಪ್ರಶ್ನೆಯನ್ನು ಕೇಳಿದ್ದು ವಾದಪತ್ರದಲ್ಲಿ ಈ ಬಗ್ಗೆ ನಮೂದು ಇಲ್ಲದ ಕಾರಣ ಸೂಚನಾ ಪ್ರಶ್ನೆಯನ್ನು ತಿರಸ್ಕರಿಸಲಾಗಿರುತ್ತದೆ.

**4.** ವಾದಿ ಮತ್ತು ಪ್ರತಿವಾದಿ ನಂ.1 ರಿಂದ 5 ರವರು ನನ್ನ ತಂದೆಯ ಕವಲಿನವರು ಎಂದರೆ ಸಾಕ್ಷಿ ನನ್ನ ತಂದೆ ನನ್ನನ್ನು ಹೊರತುಪಡಿಸಿ ಉಳಿದವರನ್ನು ತಿರಸ್ಕಾರ ಮಾಡಿರುತ್ತಾರೆ ಎನ್ನುತ್ತಾರೆ . ನಿ.ಡಿ. 10 ಮೂ. ದಾ. ನಂ. 97/2012 ದಾವೆ ದಾಖಲಾಗುವ ಸಮಯ ನನ್ನ ತಾಯಿ ಇದ್ದರು. ಸದ್ರಿ ದಾವೆಯಲ್ಲಿ ನಾನು ಉದಾಹರಣೆಯನ್ನು ಸಲ್ಲಿಸಿರುತ್ತೇನೆ . ಸದ್ರಿ ಉದಾಹರಣೆಯಲ್ಲಿ ನಾನು 3 ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಮತ್ತು 2 ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಹೇಳಿರುತ್ತೇನೆ . ಸದ್ರಿ ದಾವೆಯ ಡಿಕ್ರಿ ವಿರುದ್ಧ ಮೇಲ್ಮನವಿ ಸಂಖ್ಯೆ 11/2016 ನ್ನು ಸಲ್ಲಿಸಿರುತ್ತೇನೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ